## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ದಕ್ಷಿಣ ಕನ್ನಡ, ಮಂಗಳೂರು

## ಸ್ಪೆಷಲ್ ಕೇಸ್ ನಂಬ್ರ 73/2018

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಎಚ್.ಆರ್.ಪ್ರತೀಶ್ | ಫ್ರಾಸಾಃ 3 |
| ತಂದೆಯ ಹೆಸರು | : | ದಿ. ರಾಮೇಗೌಡ | ಚಾಸಾಃ 4 |
| ಪ್ರಾಯ | : | 41 ವರ್ಷ | ದಿನಾಂಕಃ 07.11.2023 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ರೆವಿನ್ಯೂ ಇನ್ಸ್ಪೆಕ್ಟರ್ | |
| ವಾಸಸ್ಥಳ | : | ಬೆಳ್ತಂಗಡಿ | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ನಾನು 2017 ರಲ್ಲಿ ಕೊಕ್ಕಡ ಹೋಬಳಿಯಲ್ಲಿ ಕಂದಾಯ ನಿರೀಕ್ಷಕರಾಗಿ ಕೆಲಸ ಮಾಡಿರುತ್ತೇನೆ. ಬೆಳ್ತಂಗಡಿ ತಾಲೂಕಿನ ಮೊಗ್ರು ಗ್ರಾಮ ಕೊಕ್ಕಡ ಹೋಬಳಿಯಲ್ಲಿ ಬರುತ್ತದೆ. ನ್ಯಾಯಾಲಯದಲ್ಲಿರುವ ಆರೋಪಿಗಳು ಮೊಗ್ರು ಗ್ರಾಮದವರಿರುತ್ತಾರೆ. 1 ನೇ ಆರೋಪಿ ಕ್ವಾರೆಯನ್ನು, 2 ನೇ ಆರೋಪಿ ಕಲ್ಲು ಗಣಿಗಾರಿಕೆಯನ್ನು ಅನಧಿಕೃತವಾಗಿ ಮೊಗ್ರು ಗ್ರಾಮದಲ್ಲಿ ನಡೆಸುತ್ತಿದ್ದರು.

2) 01.07.2017 ರಂದು ಉಪ ಲೋಕಾಯುಕ್ತರು ನನ್ನನ್ನು, ಗಣಿಗಾರಿಕೆ ಇಲಾಖೆ ಅಧಿಕಾರಿಗಳನ್ನು ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದ ಸರ್ವೇ ನಂಬ್ರ 62/1 ಮತ್ತು 62/2 ಕ್ಕೆ ಮಧ್ಯಾಹ್ನ 12.30 ಕ್ಕೆ ಕರೆಯಿಸಿದ್ದರು. ಅಲ್ಲಿ ಆರೋಪಿಗಳು, ಗಣಿ ಇಲಾಖೆಯವರು, ಪಂಚಾಯತಿಯವರು, ಗ್ರಾಮ ಲೆಕ್ಕಾಧಿಕಾರಿ, ಸಾರ್ವಜನಿಕರು

ಇದ್ದರು. ಅಲ್ಲಿ 1 excavator 71, 1 ಜೆಸಿಬಿ, 1 ಟಿಪ್ಪರ್, ದಪ್ಪ ಜಲ್ಲಿ, ಸಣ್ಣ ಜಲ್ಲಿ, ಬೋಲ್ಡ್ರಸ್ ಇತ್ತು. 2 ನೇ ಆರೋಪಿಯ ಮನೆಯ ಹತ್ತಿರ ಇದ್ದ ಸರ್ವೆ ನಂಬ್ರ 72/1 ರ ಕ್ವಾರೆಗೆ ಹೋಗಿರುತ್ತೇನೆ. ನನ್ನನ್ನು ಗಣಿಗಾರಿಕೆ ಮಾಡುತ್ತಿದ್ದ ಪ್ರದೇಶ ಸರ್ಕಾರಿ ಜಮೀನೋ ಅಥವಾ ಖಾಸಗಿ ಜಮೀನೋ ಎಂದು ತಿಳಿದುಕೊಳ್ಳಲು ಕರೆಯಿಸಿದ್ದರು. ಕ್ರಶರ್ ಇದ್ದ ಅರ್ಧ ಜಾಗ ಖಾಸಗಿ ಹಾಗೂ ಇನ್ನೂ ಅರ್ಧ ಸರ್ಕಾರಿ ಜಮೀನು ಆಗಿತ್ತು. ಸರ್ವೆ ನಂಬ್ರ 72 ನ್ನು ಅಳತೆ ಮಾಡಬೇಕೆಂದು ಹೇಳಿರುತ್ತೇನೆ.

3) 10.07.2017 ರಂದು ಗಣಿಗಾರಿಕೆ ಇಲಾಖೆಯ ಪದ್ಮಶ್ರೀ, ಅರಣ್ಯ ಇಲಾಖೆಯ ರಾಥೋಡ್, ಕಂದಾಯ ಇಲಾಖೆಯ ನಾನು, ಸರ್ವೇ ಇಲಾಖೆಯ ಪ್ರಕಾಶ್ ಅಲ್ಲಿಗೆ ಹೋಗಿದ್ದೆವು. ಅಲ್ಲಿ ನ್ಯಾಯಾಲಯದಲ್ಲಿರುವ ಆರೋಪಿಗಳು ಇದ್ದರು. ದಪ್ಪ ಜಲ್ಲಿ, ಸಣ್ಣ ಜಲ್ಲಿ, ಡಸ್ಟ್, ಬೋಲ್ಡ್ರಸ್ ಇದ್ದವು. ಲಾರಿಯನ್ನು ಉಪ್ಪಿನಂಗಡಿ ಪೊಲೀಸರ ವಶಕ್ಕೆ ನೀಡಲಾಯಿತು. ಉಳಿದ ವಾಹನಗಳನ್ನು 2 ನೇ ಆರೋಪಿಯ ವಶಕ್ಕೆ ನೀಡಲಾಯಿತು. ಪ್ರಕಾಶ್ ಇವರು ಅಳತೆ ಮಾಡುವಾಗ ನಾನು ಸಹಕರಿಸಿರುತ್ತೇನೆ. ಬೆಳಿಗ್ಗೆ 11.00 ರಿಂದ ಸಂಜೆಯವರೆಗೂ ಈ ಕೆಲಸ ಮಾಡಿರುತ್ತೇವೆ. ಆ ದಿನ ಸರ್ವೇ ಕೆಲಸ ಮುಗಿಸಲು ಆಗಿರಲಿಲ್ಲ. ಈಗ ತೋರಿಸಿದ ದಾಖಲೆಯಲ್ಲಿರುವ (ನಿಪಿ-1) ಸಹಿ ನನ್ನದು ಇದೆ. ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಈಗ ನೋಡಿದ ಫೋಟೋಗಳನ್ನು (ನಿಪಿ-12) ಅಲ್ಲಿ ತೆಗೆದಿರುತ್ತಾರೆ.

4) 12.07.2017 ರಂದು ಗಣಿಗಾರಿಕೆ, ಅರಣ್ಯ, ಕಂದಾಯ ಮತ್ತು ಸರ್ವೇ ಇಲಾಖೆಯವರು, ಆರೋಪಿಗಳು ಅಲ್ಲಿಗೆ ಹೋಗಿರುತ್ತೇವೆ. 1 ಜೆಸಿಬಿಯನ್ನು ಉಪ್ಪಿನಂಗಡಿ ಪೊಲೀಸ್ ಠಾಣೆಗೆ ಹಸ್ತಾಂತರಿಸಿರುತ್ತೇವೆ. PC71 ವಾಹನದ ಕೀ ಇಲ್ಲದೇ ಇರುವುದರಿಂದ ಅದನ್ನು ಹಸ್ತಾಂತರಿಸಿರುವುದಿಲ್ಲ. ಅಲ್ಲಿ ಮಹಜರ್ ಮಾಡಿರುತ್ತಾರೆ. ಮಹಜರ್ ನಲ್ಲಿ ನನ್ನ ಸಹಿ ಇರುವುದಿಲ್ಲ. ಕಲ್ಲುಕೋರೆಯಲ್ಲಿ ನೀರು ತುಂಬಿದ್ದರಿಂದ ಅಳತೆ ಮಾಡಲು ಆಗಿರುವುದಿಲ್ಲ. ಅಲ್ಲಿ ಸಾಯಂಕಾಲ 5.00 ಗಂಟೆಯವರಗೆ ಇದ್ದೆವು.

5) 03.03.2018 ರಂದು ಬೆಳಿಗ್ಗೆ ಗಣಿಗಾರಿಕೆ, ಅರಣ್ಯ, ಕಂದಾಯ ಮತ್ತು ಸರ್ವೇ ಇಲಾಖೆಯವರು, ಆರೋಪಿಗಳು ಮತ್ತೆ ಅಲ್ಲಿಗೆ ಹೋಗಿರುತ್ತೇವೆ. ಕಲ್ಲು ಗಣಿಗಾರಿಕೆ ಮಾಡಿದ ಸ್ಥಳದ ಅಳತೆ ಮಾಡಿರುತ್ತೇವೆ. ನೀರು ಕಡಿಮೆ ಆಗಿದ್ದು ಕೋಲನ್ನು ಹಾಕಿ ಅಳತೆ ಮಾಡಿರುತ್ತೇವೆ. ಈಗ ನೋಡಿದ ಫೋಟೋಗಳನ್ನು (ನಿಪಿ–23) ಅಲ್ಲಿ ತೆಗೆಯಲಾಗಿದೆ. ಸರ್ವೇ ನಂಬ್ರ 72 ರಲ್ಲಿ 1 ಸರ್ಕಾರಿ ಸರ್ವೇ ನಂಬ್ರ, 62 ರಲ್ಲಿ 1 ಸರ್ಕಾರಿ ಸರ್ವೇ ನಂಬ್ರ, ಸರ್ವೇ ನಂಬ್ರ 62 ರಲ್ಲಿ ಸ್ವಲ್ಪ ಜಾಗ 2 ನೇ ಆರೋಪಿಯ ಜಾಗ, ಸರ್ವೇ ನಂಬ್ರ 121 ರಲ್ಲಿ ಖಾಸಗಿ ಜಾಗದಲ್ಲಿ ಸಹ ಅಕ್ರಮ ಗಣಿಗಾರಿಕೆ ಆಗಿರುತ್ತದೆ. ಸಂಜೆಯವರೆಗೂ ಅಲ್ಲಿ ಇದ್ದೆವು. ಅಲ್ಲಿ ಮಹಜರ್ (ನಿಪಿ–24) ಮಾಡಿದ್ದು ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ–24(ಬಿ) ಎಂದು ಗುರುತಿಸಲಾಯಿತು. ಒಂದು ಎಕರೆಗಿಂತ ಜಾಸ್ತಿ ಜಾಗದಲ್ಲಿ (ಸರ್ಕಾರಿ ಜಮೀನು ಮತ್ತು ಆರೋಪಿಗಳ ಜಮೀನು ಇರುತ್ತದೆ) ಅಕ್ರಮ ಗಣಿಗಾರಿಕೆ ನಡೆಸಲಾಗಿತ್ತು.

ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಆರ್.ಪಿ.ಎಸ್., ವಕೀಲರಿಂದಃ

6) ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ಹೇಳಿಕೆ ಪಡೆದುಕೊಂಡಿಲ್ಲ. ನನಗೆ ಗಣಿಗಾರಿಕೆ ನಡೆಯುತ್ತಿದ್ದ ಸ್ಥಳಕ್ಕೆ ಬರುವಂತೆ ಲಿಖಿತವಾಗಿ ನೋಟೀಸ್ ನೀಡಿರಲಿಲ್ಲ. 01.07.2017 ರಂದು ಮಹಜರ್ ಮಾಡಿರುವುದಿಲ್ಲ. ಯಾವ ಸ್ಥಳ ಯಾವ ಸರ್ವೇ ನಂಬ್ರದಲ್ಲಿ ಬರುತ್ತದೆ ಎಂದುನಾನು ತೋರಿಸಿಕೊಟ್ಟಿದ್ದೇನೆ. ಆದರೆ ಅದನ್ನು ಲಿಖಿತವಾಗಿ ಕೊಟ್ಟಿಲ್ಲ. ಆ ದಿನ ಸರ್ವೇ ಮಾಡಿರುವುದಿಲ್ಲ. 01.07.2017 ರಂದು ನಾನು ಗಣಿಗಾರಿಕೆ ನಡೆಯುತ್ತಿದ್ದ ಸ್ಥಳಕ್ಕೆ ಹೋಗಿಲ್ಲ ಅನ್ನುವುದು ಸರಿಯಲ್ಲ.

7) 10.07.2017 ರಂದು ಗಣಿಗಾರಿಕೆ ನಡೆಯುತ್ತಿದ್ದ ಸ್ಥಳದಲ್ಲಿ ವಾಹನ ಚಾಲಕರು ಹಾಗೂ ಇತರರು ಯಾರು ಇರಲಿಲ್ಲ. ಆ ದಿನ ಸರ್ವೇ ಮಾಡಿರುತ್ತೇವೆ. ನಾನು ಸರ್ವೇ ರಿಪೋರ್ಟ್ ಕೊಟ್ಟಿರುವುದಿಲ್ಲ. ಸರ್ವೇ ಮಾಡಿದ ಬಗ್ಗೆ ಜಂಟಿ ರಿಪೋರ್ಟ್ ತಯಾರಿಸಿಲ್ಲ. ಸರ್ವೇ ನಂಬ್ರ 72/1, 62/1, 62/2 ರ ಸರ್ವೇ ಮಾಡಿರುತ್ತೇವೆ. ಈ ಸರ್ವೇ ನಂಬ್ರದಲ್ಲಿ ಏನೆಲ್ಲಾ ಇತ್ತು ಅನ್ನುವ ಕುರಿತು ಆ ದಿನ ವರದಿ ಕೊಟ್ಟಿಲ್ಲ.

8) ಸರ್ವೇ ನಂಬ್ರ 62/1 ರಲ್ಲಿ ಕ್ರಶರ್ ಇತ್ತು. ಈ ಸರ್ವೇ ನಂಬ್ರದಲ್ಲಿ ಕಾಲು ಭಾಗ ಪ್ರದೇಶದಲ್ಲಿ ಕ್ರಶರ್ ಇತ್ತು. ಮುಕ್ಕಾಲು ಭಾಗ ಪಟ್ಟಾ ಜಾಗದಲ್ಲಿ ಕ್ರಶರ್ ಇತ್ತು. ನನಗೆ ಈ ಸರ್ವೇ ನಂಬ್ರದ ವಿಸ್ತೀರ್ಣವನ್ನು ಸೆಂಟ್ಸ್ ನಲ್ಲಿ ಹೇಳಲು ಆಗುವುದಿಲ್ಲ. ಈ ಸರ್ವೇ ನಂಬ್ರದಲ್ಲಿ ಸರ್ಕಾರಿ ಜಾಗ ಮತ್ತು ಪಟ್ಟಾ ಜಾಗ ಇವೆ ಅನ್ನುವ ಕುರಿತು ವರದಿ

ಕೊಟ್ಟಿರುವುದಿಲ್ಲ. ಈಗ ತೋರಿಸಿದ ಮಹಜರ್ ನಲ್ಲಿ (ನಿಪಿ-1) ಸರ್ವೇ ನಂಬ್ರ 62/1 ರಲ್ಲಿ ಕ್ರಶರ್ ಇರುವ ಬಗ್ಗೆ ನಮೂದಾಗಿಲ್ಲ. ಸರ್ವೆಯರ್ ಫೀಲ್ಡ್ ಬುಕ್ ತಂದಿದ್ದರು. ನಾನು RTC ತೆಗೆದುಕೊಂಡು ಹೋಗಿದ್ದೆನು. ಆ ದಿನ ಗಣಿಗಾರಿಕೆ ಅಧಿಕಾರಿಯವರಿಗೆ RTC ಯನ್ನು ತೋರಿಸಿದ್ದೇನೆ. ಮಹಜರ್ ಗೆ ಸ್ಥಳೀಯರನ್ನು ಕರೆಯಿಸಿ ಸಾಕ್ಷಿದಾರರನ್ನಾಗಿ ಸಹಿ ಪಡೆದುಕೊಂಡಿಲ್ಲ. ಸರ್ವೇ ಮಾಡಿದ ಬಗ್ಗೆ ರಿಪೋರ್ಟನ್ನಾಗಲೀ, ಸ್ಕೆಚ್ಚನ್ನಾಗಲೀ ಆ ದಿನ ತಯಾರಿಸಿರಲಿಲ್ಲ. ನಾನು ಪೊಲೀಸ್ ಠಾಣೆಗೆ ಹೋಗಿರಲಿಲ್ಲ. 10.07.2017 ರಂದು ನಾನು ಅಲ್ಲಿಗೆ ಹೋಗಿಲ್ಲ, ಸರ್ವೇ ಮಾಡಿಲ್ಲ ಎಂದು ಹೇಳುವುದು ಸರಿಯಲ್ಲ. ಆ ಸಮಯದಲ್ಲಿ ಆರೋಪಿಗಳು ಅಲ್ಲಿ ಇರಲಿಲ್ಲ ಎಂದು ಹೇಳುವುದು ಸರಿಯಲ್ಲ. ನಿಪಿ-1 ರ ಮಹಜರ್ ಗೆ ಗಣಿ ಇಲಾಖೆ ಕಚೇರಿಯಲ್ಲಿ ಸಹಿ ಮಾಡಿದ್ದೇನೆ ಎಂದು ಹೇಳುವುದು ಸರಿಯಲ್ಲ.

9) 12.07.2017 ರಂದು ಸರ್ವೇ ನಂಬ್ರ 72/1, 62/1, 62/2, 121/1, 121/2 ಸರ್ವೇ ಮಾಡಿದ್ದರೂ ಸಹಿತ ಆ ದಿನ ರಿಪೋರ್ಟ್, ಸ್ಕೆಚ್ ಕೊಟ್ಟಿರುವುದಿಲ್ಲ. ನನ್ನ ಸಮಕ್ಷಮ ಅಲ್ಲಿ ಸ್ಕೆಚ್ಚನ್ನು ತಯಾರಿಸಿರುವುದಿಲ್ಲ. ನಿಪಿ-5 ರ ಮಹಜರ್ ನಲ್ಲಿ ಸರ್ವೇ ನಂಬ್ರ 62/2, 121/1, 121/2 ಇವುಗಳ ಉಲ್ಲೇಖ ಇರುವುದಿಲ್ಲ. ಈ ಸರ್ವೇ ಕುರಿತಾಗಿ ನಾನು ಯಾವುದೇ ದಾಖಲೆ ತಯಾರಿಸಿಲ್ಲ. 12.07.2017 ರಂದು ನಾನು ಅಲ್ಲಿಗೆ ಹೋಗಿರುವುದಿಲ್ಲ, ಅಲ್ಲಿ ಯಾವುದೇ ಸರ್ವೇ ಮಾಡಿರುವುದಿಲ್ಲ ಎಂದು ಹೇಳುವುದು ಸರಿಯಲ್ಲ.

10) ನಿಪಿ–24ರ ಮಹಜರನ್ನು ಯಾವ ಸಮಯದಿಂದ ಯಾವ ಸಮಯದವರೆಗೆ ತಯಾರಿಸಲಾಗಿದೆ ಎಂದು ಅದರಲ್ಲಿ ನಮೂದಿಸಿಲ್ಲ. ಈ ಮಹಜರ್ ನಲ್ಲಿ ನಮೂದಿಸಿರುವ ಸರ್ವೇ ನಂಬ್ರಗಳಲ್ಲಿ ಎಷ್ಟು ಸರ್ಕಾರಿ ಜಮೀನು ಎಷ್ಟು ಖಾಸಗಿ ಜಮೀನು ಎಂದು ನಮೂದಿಸಿಲ್ಲ. ನಿಪಿ–24ರಲ್ಲಿ ನಮೂದಿಸಿದ ಸರ್ವೇ ನಂಬ್ರ 62/1, 121/2, 120/2 ಪಟ್ಟಾ ಜಮೀನು ಇರುತ್ತದೆ. ಈ ಮಹಜರ್ ನಲ್ಲಿ ಪಟ್ಟಾ ಜಮೀನು ಮಾಲೀಕರ ಹೆಸರು ನಮೂದು ಇಲ್ಲ. ಸರ್ವೇ ಮಾಡಿದ ಬಗ್ಗೆ ನಾವು ರಿಪೋರ್ಟ್ ಮತ್ತು ಸ್ಕೆಚ್ ನೀಡಿರುವುದಿಲ್ಲ. ನೀರು ಇದ್ದ ಗುಂಡಿಗಳಲ್ಲಿ ಕೋಲು ಇಳಿಬಿಟ್ಟು ಅಳತೆ ಮಾಡಿದ ಬಗ್ಗೆ ಮಹಜರ್ ನಲ್ಲಿ ನಮೂದಿಸಿಲ್ಲ. 03.03.2018ರಂದು ನಾನು ಅಲ್ಲಿಗೆ ಹೋಗಿಲ್ಲ, ಸರ್ವೇ ಮಾಡಿಲ್ಲ ಎಂದು ಹೇಳುವುದು ಸರಿಯಲ್ಲ. ಆ ಸಮಯದಲ್ಲಿ ಆರೋಪಿಗಳು ಅಲ್ಲಿ ಇರಲಿಲ್ಲ ಎಂದು ಹೇಳುವುದು ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ದ.ಕ. ಮಂಗಳೂರು.